ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಇತರೆ ರಾಜ್ಯಗಳ ಮಾಹಿತಿ

ಪತ್ರಿಕೆಯ ಹೆಸರು : NAME OF THE NEWS PAPER : ಪ್ರಜಾವಾಣಿ

ದಿನಾಂಕ : DATE : 06/07/2019

# ರಾಜ್ಯಸಭೆಗೆ ಸಚಿವ ಜೈಶಂಕರ್ ಆಯ್ಕೆ

ಪ್ರ. ವಾ. 6-7-19

## ನೂರಕ್ಕೂ ಹೆಚ್ಚು ಮತ ಪಡೆದ ಬಿಜೆಪಿಯ ಇಬ್ಬರು ಅಭ್ಯರ್ಥಿಗಳು

ಗಾಂಧಿನಗರ (ಪಿಟಿಐ): ಗುಜರಾತ್‌ನಿಂದ ರಾಜ್ಯಸಭೆಗೆ ಶುಕ್ರವಾರ ನಡೆದ ಚುನಾವಣೆಯಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಮತ್ತು ಮತ್ತೊಬ್ಬರು ಬಿಜೆಪಿ ಅಭ್ಯರ್ಥಿ ಹಾಗೂ ಒಬಿಸಿ ಮುಖಂಡ ಜಗ್‌ಲಾಜಿ ಠಾಕೂರ್ ಆಯ್ಕೆಯಾದರು.



ಚುನಾವಣಾ ಅಧಿಕಾರಿಗಳು ಅಧಿಕೃತ ಘೋಷಣೆ ಮಾಡುವುದು ಬಾಕಿ ಇದ್ದರೂ, ಮುಖ್ಯಮಂತ್ರಿ ವಿಜಯ್ ರೂಪಾಣಿ ಅವರು ಬಿಜೆಪಿ ಅಭ್ಯರ್ಥಿಗಳು ಆಯ್ಕೆಯಾಗಿರುವ ಕುರಿತು ಮಾಧ್ಯಮಗಳಿಗೆ ತಿಳಿಸಿದರು.

ಕಾಂಗ್ರೆಸ್, ಚಂದ್ರಿಕಾ ಚೂಡಾಸಮ ಮತ್ತು ಗೌರವ್ ಪಾಂಡ್ಯ ಅವರನ್ನು ಕಣಕ್ಕಿಳಿಸಿತ್ತು. ಅಮಿತ್ ಶಾ ಮತ್ತು ಸ್ಮೃತಿ ಇರಾನಿ ಅವರು ಲೋಕಸಭೆಗೆ ಆಯ್ಕೆಯಾಗಿದ್ದರಿಂದ 2 ಸ್ಥಾನ ಖಾಲಿಯಾಗಿದ್ದವು.

ಜೈಶಂಕರ್ ಮತ್ತು ಠಾಕೂರ್ ಅವರು 100ಕ್ಕೂ ಹೆಚ್ಚು ಮತಗಳನ್ನು ಪಡೆದರು.

'ಚುನಾವಣೆಗೆ ಕಾಂಗ್ರೆಸ್ ಅಡ್ಡಿಪಡಿಸಿತ್ತು ಅಲ್ಲದೆ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಆದರೆ ಅವರ ಪ್ರಯತ್ನ ವಿಫಲವಾಗಿದೆ' ಎಂದು ರೂಪಾಣಿ ಹೇಳಿದರು.

## ಶಾಸಕ ಅಲ್ಪೇಶ್ ಠಾಕೂರ್ ರಾಜೀನಾಮೆ



ರಾಜ್ಯಸಭಾ ಚುನಾವಣೆ ನಂತರ ಕಾಂಗ್ರೆಸ್ ಶಾಸಕರಾದ ಅಲ್ಪೇಶ್ ಠಾಕೂರ್ ಮತ್ತು ಧವಲ್ ಸಿಂಗ್ ಝಾಲಾ ಅವರು ಶಾಸಕ ಸ್ಥಾನಕ್ಕೆ ಗುರುವಾರ ರಾಜೀನಾಮೆ ನೀಡಿದರು.

ಕಾಂಗ್ರೆಸ್ ಅಭ್ಯರ್ಥಿಗಳಿಗೆ ಮತಹಾಕದೆ ಬಿಜೆಪಿ ಅಭ್ಯರ್ಥಿಗಳಿಗೆ ಮತಹಾಕಿದ್ದರು ಎಂದು ಕಾಂಗ್ರೆಸ್‌ನ ಹಿರಿಯ ಮುಖಂಡರೊಬ್ಬರು ತಿಳಿಸಿದರು.

ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ ನಂತರ ಕಾಂಗ್ರೆಸ್ ಮೇಲೆಯೇ ದಾಳಿ ಮಾಡಿದ ಠಾಕೂರ್, 'ಪ್ರಾಮಾಣಿಕ ರಾಷ್ಟ್ರೀಯ ನಾಯಕತ್ವ'ಕ್ಕೆ ಮತ ಚಲಾಯಿಸಿರುವುದಾಗಿ ಹೇಳಿದರು.

'ದೇಶವನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ಯಬೇಕಾಗಿದೆ. ನನ್ನ ಒಳಮನಸಿನ ನಿರ್ಧಾರದಂತೆ ಮತ ಚಲಾಯಿಸಿದ್ದೇನೆ' ಎಂದು ಮತದಾನ ನಂತರ ಅಲ್ಪೇಶ್ ಹೇಳಿದರು.

ಗುಜರಾತ್‌ನಲ್ಲಿ ಇತರೆ ಹಿಂದುಳಿದ ವರ್ಗದ ಪ್ರಮುಖ ಮುಖಂಡನಾಗಿ ಗುರುತಿಸಿಕೊಂಡಿದ್ದ ಠಾಕೂರ್, ರಾಧನ್‌ಪುರದಿಂದ ಆಯ್ಕೆಯಾಗಿದ್ದರು. 2017 ರಲ್ಲಿ ಕಾಂಗ್ರೆಸ್‌ಗೆ ಸೇರಿದ್ದರು. 'ಪಕ್ಷದಲ್ಲಿ ನಾನು ಖುಷಿಯಾಗಿರಲಿಲ್ಲ' ಎಂದು ಅವರು ಹೇಳಿದರು.

'ಕಾಂಗ್ರೆಸ್‌ನಲ್ಲಿದ್ದಾಗ ಮಾನಸಿಕ ಒತ್ತಡ ಬಿಟ್ಟು ಬೇರೇನೂ ನನಗೆ ಸಿಗಲಿಲ್ಲ. ಈಗ ರಾಜೀನಾಮೆ ನೀಡಿರುವುದರಿಂದ ಹೊರೆಯಿಂದ ಮುಕ್ತನಾಗಿದ್ದೇನೆ' ಎಂದು ಹೇಳಿದರು. 'ನನ್ನ ತೀರ್ಮಾನದ ಬಗ್ಗೆ ಈಗಾಗಲೇ ರಾಹುಲ್ ಗಾಂಧಿ ಸೇರಿದಂತೆ ಹಲವು ನಾಯಕರಿಗೆ ತಿಳಿಸಿದ್ದೆ' ಎಂದರು.